**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.1902/2025</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಜ್ಞಾನಪ್ರಕಾಶ್ | ಪ್ರಾಸಾ-1 |
| ತಂದೆಯ ಹೆಸರು | : ರಾಜೇಂದ್ರನ್ | ಚಾಸಾ-1 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 16.10.2025 |
| ವಾಸಸ್ಥಳ | : ಕಳಗೋಡು | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-2, 3, 10 ಮತ್ತು 11 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ದಿ.01.02.2025 ರಂದು ತಾವು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಹೇಳಿಕೆಯನ್ನು ನಿಪಿ-1 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ಗನ್ ನ್ನು ಈ ಹಿಂದೆ ಎಂದು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಕಳೆದ 1 ವರ್ಷದ ಹಿಂದೆ ನಾನು ಪೋಲಿಸ್ ಠಾಣೆಗೆ ನನ್ನ ವಯಕ್ತಿಕ ವಿಚಾರವಾಗಿ ಹೋದ ಸಮಯದಲ್ಲಿ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನನ್ನು ಬರೆಯಲಾಗಿತ್ತು ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ ಮತ್ತು ಪೋಲಿಸರು ನನಗೆ ಓದಿ ತಿಳಿಸಿರುವುದಿಲ್ಲ. ಇದನ್ನು ಹೊರತುಪಡಿಸಿ ನನಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ವಿಷಯ ತಿಳಿದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ದಿ.30.01.2025 ರಂದು ರಾ.10.30 ರ ಸಮಯದಲ್ಲಿ ನಾನು ಆರೋಪಿಯ ಬಂದೂಕನ್ನು ತೋಟದಲ್ಲಿ ಹಿಡಿದುಕೊಂಡು ಹೋಗುವಾಗ ಬಂದೂಕು ಆಕಸ್ಮಿಕವಾಗಿ ನನ್ನ ಕೈಯಲ್ಲಿ ಬ್ಲಾಸ್ಟ್ ಆಗಿ ನನ್ನ ಕೈಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ದಿ.31.01.2025 ರಂದು ಎ.ಜೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದು ದಿ.30.01.2025 ರಂದು ರಾ.10.30 ರ ಸಮಯದಲ್ಲಿ ಆರೋಪಿಯ ತೋಟದಲ್ಲಿ ಏನೋ ಶಬ್ದ ಕೇಳಿ ಬಂದಿದ್ದು, ಅದನ್ನು ನೋಡಿ ಬರೋಣ ಎಂದು ಆರೋಪಿಯ ಸೂಚನೆ ಮೇರೆಗೆ ನಾನು ಮತ್ತು ಚಾಸಾ-10 ರವರು ಆರೋಪಿಯ ತೋಟಕ್ಕೆ ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಸದರಿ ಸಮಯದಲ್ಲಿ ಆರೋಪಿಯವರು ಬಂದೂಕನ್ನು ಹಿಡಿದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಬಂದೂಕನ್ನು ಆರೋಪಿಯು ನನ್ನ ಕೈಗೆ ನೀಡಿದ್ದು, ಬಂದೂಕನ್ನು ಹೇಗೆ ಉಪಯೋಗಿಸಬೇಕು ಎಂದು ನನಗೆ ತಿಳಿಯದೇ ಇದ್ದ ಕಾರಣ ನಾನು ಆಕಸ್ಮಿಕವಾಗಿ ಕಾಲು ಜಾರಿ ಪಕ್ಕದ ಗುಂಡಿ ಜಾಗಕ್ಕೆ ಬಿದ್ದಿದ್ದರಿಂದ ನಾನು ಹಿಡಿದುಕೊಂಡಿದ್ದ ಬಂದೂಕು ಆಕಸ್ಮಿಕವಾಗಿ ನೆಲದಲ್ಲಿದ್ದ ಕಲ್ಲಿಗೆ ತಾಕಿ ನನ್ನ ಕೈಯಲ್ಲಿ ಬ್ಲಾಸ್ಟ್ ಆಯಿತು ಎಂದರೆ ನನಗೆ ತಿಳಿದಿರುವುದಿಲ್ಲ.

ಆದ್ದರಿಂದ ನನ್ನ ಅಂಗೈ ಗೆ ತೀರ್ವವಾದ ರಕ್ತಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಆರೋಪಿ ಮತ್ತು ಚಾಸಾ-10 ರವರು ನನ್ನನ್ನು ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಮಂಗಳೂರಿನ ಎ.ಜೆ ಆಸ್ಪತ್ರೆಯಲ್ಲಿ ಪೋಲಿಸರಿಗೆ ನಾನು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ದಿ.17.06.2025 ರ ತಮ್ಮ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು, ಸದರಿ ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು. ಆರೋಪಿಯು ಪರಿಚಯಸ್ಥರಾಗಿದ್ದು ಮತ್ತು ಅವರೊಟ್ಟಿಗೆ ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.

# <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>

## <u>ಸಿ.ಸಿ.1902/2025</u>

| | | |
|---|---|---|
| ಸಾಕ್ಷಿದಾರರ ಹೆಸರು | : ವಿಶ್ವನಾಥ್ | ಪ್ರಾಸಾ-2 |
| ತಂದೆಯ ಹೆಸರು | : ಶಂಕರಪ್ಪ | ಚಾಸಾ-2 |
| ವಯಸ್ಸು | : 36 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ 16.10.2025 |
| ವಾಸಸ್ಥಳ | : ಕಳಗೋಡು | |

### <u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿಲ್ಲ. ಚಾಸಾ-3 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ದಿ.03.02.2025 ರಂದು ಬರೆದಂತಹ ಎರಡು ಮಹಜರ್ ಪ್ರತಿಯಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಪ್ರತಿಯನ್ನು ನಿಪಿ-3 ಮತ್ತು 4, ಸಾಕ್ಷಿಯು ಸಹಿಯನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 2 ಫೋಟೋವನ್ನು ತೋರಿಸಲಾಗಿ ಅದರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿದ್ದು, ಅದನ್ನು ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು. ಸಾಕ್ಷಿಗೆ 1 ಫೋಟೋಗಳನ್ನು ತೋರಿಸಲಾಗಿ ಅದರಲ್ಲಿ ಕಂಡುಬರುವ ಗನ್ ನ್ನು ಈ ಹಿಂದೆ ಎಂದು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮುದ್ದೆ ಮಾಲುಗಳನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿ ಇರುವ ಬಗ್ಗೆ ಗುರುತಿಸಿರುತ್ತಾರೆ. ಆದರೆ ಸಾಕ್ಷಿಯು ಸದರಿ ಮುದ್ದೆ ಮಾಲುಗಳನ್ನು ಗುರುತಿಸಲು ನಿರಾಕರಿಸಿರುತ್ತಾರೆ ಮತ್ತು ಸದರಿ ವಸ್ತುಗಳನ್ನು ಮೇಲೆ ಯಾವ ಸಮಯದಲ್ಲಿ ಸಹಿಯನ್ನು ಪಡೆಯಲಾಗಿದೆ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

ಕಳೆದ 1 ವರ್ಷದ ಹಿಂದೆ ದಿವಾಕರ್ ಎಂಬುವವರ ತೋಟದಲ್ಲಿ ಕೆಲಸ ಮಾಡುತಿದ್ದ ಸಮಯದಲ್ಲಿ  ಪೋಲಿಸರ ಕೋರಿಕೆಯ ಮೇರೆಗೆ ನಿಪಿ-3 ಮತ್ತು 4 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವ ವಿಚಾರಕ್ಕೆ ಮಾಡಿರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ ಮತ್ತು ನಿಪಿ-3 ಮತುತ 4 ರಲ್ಲಿ ಯಾವ ಅಂಶಗಳನ್ನು ಬರೆಯಲಾಗಿರುತ್ತದೆ ಎಂದು ನಾನು ಓದಿ ನೋಡಿರುವುದಿಲ್ಲ ಮತ್ತು ಪೋಲಿಸರು ಓದಿ ತಿಳಿಸಿರುವುದಿಲ್ಲ. ನಿಪಿ-5 ಮತ್ತು 6 ನ್ನು ದಿವಾಕರ್ ರವರು ತೋಟದ ಬಳಿ ತೆಗೆದಿರುತ್ತಾರೆ. ಆದರೆ ಯಾವ ವಿಚಾರಕ್ಕೆ ತೆಗೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಾನು ಸಹಿ ಮಾಡಿದ ಖಚಿತ ಸಮಯ ನನಗೆ ತಿಳಿದಿರುವುದಿಲ್ಲ. ಆಗ ನಾನೊಬ್ಬನೇ ಹಾಜರಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ದಿ.03.02.2025 ರಂದು ನಾನು ನಿಪಿ-3 ಮತ್ತು 4 ಕ್ಕೆ ಆರೋಪಿಯ ತೋಟದಲ್ಲಿ ಮ.2.20 ರಿಂದ 3.00 ರ ಸಮಯದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ನನ್ನ ಸಮಕ್ಷಮದಲ್ಲಿ ಆರೋಪಿಯೇ ಪೋಲಿಸರಿಗೆ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ರಕ್ತದ ಕಲೆಯುಳ್ಳ ಎರಡು ಕಲ್ಲನ್ನು ಪೋಲಿಸರು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-5 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಮುಂದುವರೆದು ಅದೇ ದಿನ ಆರೋಪಿಯ ತೋಟದಲ್ಲಿ ಒಂದು ಬಂದೂಕನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಬಂದೂಕಿನ ಎರಡು ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿಲು ನಿರಾಕರಿಸಿರುತ್ತಾರೆ. ಸದರಿ ಸಮಯದಲ್ಲಿ ಎಂದು ಪ್ಲಾಸ್ಟಿಕ್ ಡಬ್ಬ ಮತ್ತು ಒಂದು ಕಪ್ಪು ಪ್ಲಾಸ್ಟಿಕ್ ಕವರ್ ನ್ನು ವಶಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೋಲಿಸರು ಒಂದು ವಿವಿಧ ಗಾತ್ರದ ಸೀಸದ ಬಾಲ್ ಗಳಿರುವ ಎರಡು ಪ್ಲಾಸ್ಟಿಕ್ ಡಬ್ಬಗಳು, ಬಂದೂಕಿನ ಕೇಪ್ ಗಳು ಇರುವ ಪ್ಲಾಸ್ಟಿಕ್ ಡಬ್ಬ, ಗನ್ ಪೌಡರ್ ಇರುವ ಒಂದು ಅಲ್ಯೂಮಿನಿಯಂ ಬಾಟಲ್ ಮತ್ತು ಮುಷ್ಟಿ ಗಾತ್ರದ ತೆಂಗಿನ ಕತ್ತ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ನ್ನು ಯಾವ ಸಮಯದಲ್ಲಿ ಮತ್ತು ಯಾವ ವಿಷಯದ ಕುರಿತು ಬರೆಯಲಾಗಿದೆ ಎಂದು ತಿಳಿದಿದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.